ಇ) ಈ ಯೋಜನೆಯಡಿ ಎಡದಂಡೆ ಮತ್ತು ಬಲದಂಡೆ ನಾಲೆಗಳಲ್ಲಿ ಯಾವುದೇ ಅಣೆಕಟ್ಟುಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆ, ಜಾವಗಲ್ ಹೋಬಳಿಗೆ ನಾಡ ಕಛೇರಿ ಮಂಜೂರು ಮಾಡುವ ಬಗ್ಗೆ :

573 ಶ್ರೀ ವೈ.ಎನ್. ರುದ್ರೇಶ್‌ಗೌಡ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಜಾವಗಲ್ ಹೋಬಳಿಯು ಅತ್ಯಂತ ದೊಡ್ಡ ಹೋಬಳಿಯಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇಲ್ಲಿಗೆ ನಾಡಕಛೇರಿಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದಲ್ಲಿ ಜಾವಗಲ್ ಹೋಬಳಿಗೆ ನಾಡಕಛೇರಿ ಮಂಜೂರು ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಜಾವಗಲ್ ಹೋಬಳಿಯ ಭೌಗೋಳಿಕ ವಿಸ್ತೀರ್ಣ, ಭೂಕಂದಾಯ, ಜನಸಂಖ್ಯೆ ಮತ್ತು ಜಾನುವಾರು ಸಂಖ್ಯೆ ವಿವರಗಳ ಪ್ರಕಾರ ಈ ಹೋಬಳಿಯು ಹಾಸನ ಜಿಲ್ಲೆಯಲ್ಲಿ 4ನೇ ಸ್ಥಾನದಲ್ಲಿದೆ.

ಆ) ಹೊಸದಾಗಿ ನಾಡ ಕಛೇರಿಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

212 ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ: ನಂಜುಂಡಪ್ಪ ವರದಿ ಪ್ರಕಾರ ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಜಟ್ಟೂರ ಗ್ರಾಮದ ಹತ್ತಿರ ಲೋವರ ಮುಲ್ಲಾಮಾರಿ ನದಿಗೆ ಕೆ.ಎನ್.ಎನ್.ಎಲ್. ವತಿಯಿಂದ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) – ಇಲ್ಲ –

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

450 ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಸ್.ಎಸ್.ಐ.ಡಿ.ಸಿ. ವಸಾಹತುನಲ್ಲಿರುವ ಬಾಡಿಗೆ ಪಡೆದು ಓ.ವೈ.ಓ.ಎಸ್.ಎಸ್. ಅಡಿಯಲ್ಲಿ ಇನ್ನೂ ಉಪಯೋಗ ಪಡೆಯದೆ ಇರುವ ಕೈಗಾರಿಕಾ ವಸಾಹತುಗಳು ಎಷ್ಟು;

ಆ) ಕೈಗಾರಿಕಾ ವಸಾಹತುಗಳಲ್ಲಿ ಕೈಗಾರಿಕೆಯನ್ನು 25 ವರ್ಷಗಳಿಂದ ನಡೆಸುತ್ತಾ ಬಂದಿರುವವರಿಗೆ ಉಚಿತವಾಗಿ ಬಡ್ಡಿ ಇಲ್ಲದೆ ಮೂಲ ಬೆಲೆಯಲ್ಲಿ ಅವರು ಉಪಯೋಗಿಸುತ್ತಾ ಬಂದಿರುವ ಷೆಡ್ಡುಗಳನ್ನು ಓ.ವೈ.ಎಸ್.ಎಸ್. ಅಡಿಯಲ್ಲಿ ಕೊಡಲಾಗುತ್ತಿದೆಯೇ;

ಇ) ಓ.ವೈ.ಓ.ಎಸ್.ಎಸ್. ಯೋಜನೆಯಡಿಯಲ್ಲಿ ಅತಿ ಸಣ್ಣ ಕೈಗಾರಿಕಾ ಉದ್ಯಮಗಳಿಗೆ ಬಡ್ಡಿ ವಿಧಿಸುತ್ತಿರುವುದೆ?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ಸರ್ಕಾರವು ಓ.ವೈ.ಓ.ಎಸ್.ಎಸ್. ಸೌಲಭ್ಯವನ್ನು ಹತ್ತು ಬಾರಿ ವಿಸ್ತರಿಸಿರುತ್ತದೆ. ಇತ್ತೀಚೆಗೆ ಸರ್ಕಾರವು ದಿನಾಂಕ: 30–07–2009ರ ಸರ್ಕಾರಿ ಆದೇಶ ಸಂಖ್ಯೆ: ಸಿಐ 115 ಸಿಎಸ್‌ಸಿ 2009 ರಂತೆ ಸದರಿ ಯೋಜನೆಯನ್ನು ದಿನಾಂಕ: 30–09–2009 ರವರೆವಿಗೆ ವಿಸ್ತರಿಸಲಾಗಿರುತ್ತದೆ.

ಅದರಂತೆ, ಕೆ.ಜಿ.ಎಫ್ ಕೈಗಾರಿಕಾ ವಸಾಹತುವಿನಲ್ಲಿ – 3, ಶಹಬಾದ್ ಕೈಗಾರಿಕಾ ವಸಾಹತುವಿನಲ್ಲಿ – 3, ಹಾಸನ ಕೈಗಾರಿಕಾ ವಸಾಹತುವಿನಲ್ಲಿ – 2, ಹಾಗೂ ಕಡೂರು–ಬೀರೂರು ಕೈಗಾರಿಕಾ ವಸಾಹತುವಿನಲ್ಲಿ – 2 ಹಂಚಿಕೆದಾರರಿಗೆ ಯೋಜನೆಯನ್ನು ವಿಸ್ತರಿಸಲಾಗಿದ್ದು, ಹಾಸನ ಕೈಗಾರಿಕಾ ವಸಾಹತುವಿನ ಒಬ್ಬ ಹಂಚಿಕೆದಾರರು ಮಾತ್ರ ಸದರಿ ಯೋಜನೆಯ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ.